# ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ – 1

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1

## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 30.00 | 06 | 06 |
| 2 | ಗ್ರಹಿಕೆ | 30.00 | 06 | 03 |
| 3 | ಅಭಿವ್ಯಕ್ತಿ | 30.00 | 06 | 03 |
| 4 | ಪ್ರಶಂಸೆ | 10.00 | 02 | 01 |
| | **ಒಟ್ಟು** | **100** | **20** | **13** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 15 | 03 | 03 |
| 2 | ಕಿರು ಉತ್ತರ – 1 | 15 | 03 | 03 |
| 3 | ಕಿರು ಉತ್ತರ – 2 | 70 | 14 | 07 |
| | **ಒಟ್ಟು** | **100** | **20** | **13** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 06 | 06 |
| 2 | ಸಾಧಾರಣ | 50 | 10 | 05 |
| 3 | ಕಠಿಣ | 20 | 04 | 02 |
| | **ಒಟ್ಟು** | **100** | **20** | **13** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | **35** | **07** | **04** |
| 2 | **ಪದ್ಯ ಒಟ್ಟು** | **35** | **07** | **04** |
| 3 | **ಪಠ್ಯಪೋಷಕ ಅಧ್ಯಯನ** | **05** | **01** | **01** |
| 4 | **ವ್ಯಾಕರಣಾಂಶಗಳು, ವಾಕ್ಯ ರಚನೆ ಒಟ್ಟು** | **25** | **05** | **04** |
| | **ಸಮಗ್ರ ಒಟ್ಟು** | **100** | **20** | **13** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ರಾಮರಾಜ್ಯ | 20 | 03 | **02** |
| 2 | ಬೆಡಗಿನ ತಾಣ ಜಯಪುರ | 15 | 04 | **02** |
| | **ಗದ್ಯ ಒಟ್ಟು** | **35** | **07** | **04** |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಹೊಸಹಾಡು | 20 | 04 | 02 |
| 2 | ಪಾರಿವಾಳ | 15 | 03 | 02 |
| | **ಪದ್ಯ ಒಟ್ಟು** | **35** | **07** | **04** |

## 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಗುಣಸಾಗರಿ ಪಂಡರೀಬಾಯಿ | 05 | 01 | 01 |
| | **ಪಠ್ಯ ಪೋಷಕ ಅಧ್ಯಯನ ಒಟ್ಟು** | **05** | **01** | **01** |

## 4. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವ್ಯಾಕರಣಾಂಶಗಳು | 15 | 03 | 03 |
| 2 | ವಾಕ್ಯ ರಚನೆ | 10 | 02 | 01 |
| | **ಒಟ್ಟು** | **25** | **05** | **04** |

**ಹಂತ : 5.** **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1**

**9 ನೆಯ ತರಗತಿ ಪ್ರಥಮ ಭಾಷೆ ಕನ್ನಡ**

**ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ**

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 1 | ಕಿ. ಉ. 2 | ದೀ ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ಕಿ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ ಉ. 2 | | | |
| 1 | ರಾಮರಾಜ್ಯ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| 2 | ಬೆಡಗಿನ ತಾಣ ಜಯಪುರ | ** | ** | ** | 1(2) | ** | 1(2) | ** | ** | ** | ** | ** | 2(2) | ** | ** | ** | 4 | 2 |
| | **ಗದ್ಯ ಒಟ್ಟು** | ** | **1(1)** | ** | **1(2)** | ** | **2(2)** | ** | ** | ** | ** | **1(1)** | **3(2)** | ** | ** | ** | **7** | **4** |
| 1 | ಹೊಸಹಾಡು | ** | ** | ** | 1(2) | ** | ** | ** | ** | 1(2) | ** | ** | 2(2) | ** | ** | ** | 4 | 2 |
| 2 | ಪಾರಿವಾಳ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| | **ಪದ್ಯ ಒಟ್ಟು** | ** | **1(1)** | ** | **2(2)** | ** | ** | ** | ** | **1(2)** | ** | **1(1)** | **3(2)** | ** | ** | ** | **7** | **4** |
| 1 | ಗುಣಸಾಗರಿ ಪಂಡರೀಬಾಯಿ | ** | 1(1) | ** | ** | ** | ** | ** | ** | ** | ** | 1(1) | ** | ** | ** | ** | 1 | 1 |
| | **ಪಠ್ಯಪೋಷಕ ಅಧ್ಯಯನ** | ** | **1(1)** | ** | ** | ** | ** | ** | ** | ** | ** | **1(1)** | ** | ** | ** | ** | **1** | **1** |
| 1 | ವಾಕ್ಯ ರಚನೆ | ** | ** | ** | ** | ** | 1(2) | ** | ** | ** | ** | ** | 1(2) | ** | ** | ** | 2 | 1 |
| 2 | ವ್ಯಾಕರಣಾಂಶಗಳು | 3(1) | ** | ** | ** | ** | ** | ** | ** | ** | 3(1) | ** | ** | ** | ** | ** | 3 | 3 |
| | **ಒಟ್ಟು** | **3(1)** | ** | ** | ** | ** | ** | ** | ** | ** | **3(1)** | ** | **1(2)** | ** | ** | ** | **5** | **4** |
| | **ಸಮಗ್ರ ಒಟ್ಟು** | **3(1)** | **3(1)** | ** | **3(2)** | ** | **3(2)** | ** | ** | **1(2)** | **3(1)** | **3(1)** | **7(2)** | ** | ** | | **20** | **13** |
| | | **06** | | **06** | | | **06** | | | **2** | **20** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

---

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**1.** ‘ಪರಿಣಯ’ ಪದದಲ್ಲಿ ಬಂದಿರುವ ಅನುನಾಸಿಕಾಕ್ಷರವಿದು;
(ಎ) ಪ (ಬಿ) ರಿ
(ಸಿ) ಣ (ಡಿ) ಯ

**2.** ಗುಣ ಸಂಧಿಗೆ ಉದಾಹರಣೆಯಾದ ಪದವಿದು;
(ಎ) ಗಿರೀಶ (ಬಿ) ಗಣೇಶ
(ಸಿ) ಏಕೈಕ (ಡಿ) ಸಭಾಂಗಣ

**3.** ‘ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು’ – ಈ ವಾಕ್ಯದಲ್ಲಿರುವ ಅಲಂಕಾರ;
(ಎ) ರೂಪಕ (ಬಿ) ದೃಷ್ಟಾಂತ
(ಸಿ) ಉತ್ಪ್ರೇಕ್ಷೆ (ಡಿ) ಉಪಮಾ

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**4.** ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?
**5.** ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?
**6.** ಪಂಡರೀಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ ಯಾವ ಪ್ರಶಸ್ತಿಯನ್ನು ನೀಡಲಾಗಿದೆ?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**7.** ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.
**8.** ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1*2=2**

**9.** ಎನ್. ರಂಗನಾಥ ಶರ್ಮಾ

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*2=2**

**10.** * **ದೇಶ ಸುತ್ತು ಕೋಶ ಓದು.**
* **ತುಂಬಿದ ಕೊಡ ತುಳುಕುವುದಿಲ್ಲ.**

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **1*2=2**

**11.** “ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು”

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**12.** ದಟ್ಟ ______________________

______________________

______________________ ಜೋಡಿ ॥

**ಅಥವಾ**

ಹಗಲಿರುಳು ______________________

______________________

______________________ ಬಂದು

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

**13.** ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1**

**9 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ**

**ಮೌಲ್ಯಮಾಪನ ಸೂಚಿ (ಮಾದರಿ ಉತ್ತರ ಪತ್ರಿಕೆ)**

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

---

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

**1.** 'ಪರಿಣಯ' ಪದದಲ್ಲಿ ಬಂದಿರುವ ಅನುನಾಸಿಕಾಕ್ಷರವಿದು;
(ಎ) ಪ (ಬಿ) ರಿ
(ಸಿ) ಣ (ಡಿ) ಯ **ಉತ್ತರ : (ಸಿ) ಣ**

**2.** ಗುಣ ಸಂಧಿಗೆ ಉದಾಹರಣೆಯಾದ ಪದವಿದು;
(ಎ) ಗಿರೀಶ (ಬಿ) ಗಣೇಶ
(ಸಿ) ಏಕೈಕ (ಡಿ) ಸಭಾಂಗಣ **ಉತ್ತರ : (ಬಿ) ಗಣೇಶ**

**3.** 'ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು' – ಈ ವಾಕ್ಯದಲ್ಲಿರುವ ಅಲಂಕಾರ;
(ಎ) ರೂಪಕ (ಬಿ) ದೃಷ್ಟಾಂತ
(ಸಿ) ಉತ್ಪ್ರೇಕ್ಷೆ (ಡಿ) ಉಪಮಾ **ಉತ್ತರ : (ಡಿ) ಉಪಮಾ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

**4.** **ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?**
ಅಮಾತ್ಯರು ರಾಜ್ಯಶಾಸ್ತ್ರ ವಿಷಯದಲ್ಲಿ ನಿಪುಣರಾಗಿರಬೇಕು.

**5.** **ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?**
ಮುದ್ದು ಪಾರಿವಾಳಗಳ ಜೋಡಿ ದಟ್ಟ ಕಾಡಿನಲ್ಲಿ ಒಂದು ಹೆಮ್ಮರದ ಪೊಟರೆಯಲ್ಲಿ ಸಂಸಾರ ಹೂಡಿದ್ದವು.

**6.** **ಪಂಡರೀಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ ಯಾವ ಪ್ರಶಸ್ತಿಯನ್ನು ನೀಡಲಾಗಿದೆ?**
ಪಂಡರೀಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ **'ಫಿಲ್ಮ್‌ಫೇರ್'** ಪ್ರಶಸ್ತಿಯನ್ನು ನೀಡಲಾಗಿದೆ.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**7.** **ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.**
ಅರಮನೆಯ ಆವರಣದ ತಗ್ಗಿನ ಕಣಿವೆಯ ತಳದಲ್ಲೇ ಮೀರಾಬಾಯಿಯ ದೇವಾಲಯ ಕಾಣಿಸುತ್ತದೆ. ಇದು ಆಕೆ ಗಿರಿಧರ ನಾಗರನನ್ನು ಪೂಜಿಸಿದ ಸ್ಥಳ. ಕೆಳಗಿಳಿದು ಹೋಗಿ ಗುಡಿಯನ್ನು ನೋಡಿದರೆ ಅದರ ಸೊಬಗು ಚೆನ್ನಾಗಿ ಕಾಣುತ್ತದೆ. ನಕ್ಷತ್ರಾಕೃತಿಯನ್ನು ತುಂಬಿಕೊಂಡ ಗರ್ಭಗೃಹ, ನವರಂಗಗಳು ಬಹಳ ಸೊಬಗಿನಿಂದ ಕೂಡಿದೆ.

**8. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?**
ಜಾತಿ ಕುಲ ಮತ ಧರ್ಮಗಳ ಬಂಧನವನ್ನು ಕಡಿದು ಒಗೆದು ಎದೆ ಹಿಗ್ಗುವಂತಹ ಹಾಡನ್ನು ಹಾಡಬೇಕು. ಯುಗಗಳು ಉರುಳಿದರೂ ಲೋಕದೊಳಗೆ, ಜಾತ್ಯತೀತ ಮನೋಭಾವದ ಹಾಡು ಗುಡುಗಬೇಕು ಎಂದು ಕವಿ ಆಶಿಸುತ್ತಾನೆ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **1*2 =2**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

**9. ಎನ್. ರಂಗನಾಥ ಶರ್ಮಾ**
ಮಹಾಮಹೋಪಾಧ್ಯಾಯ ವಿದ್ವಾನ್ ಡಾ. ಎನ್. ರಂಗನಾಥ ಶರ್ಮಾ ಅವರು ಕ್ರಿ. ಶ. 1916 (07–01–1916)ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನಡಹಳ್ಳಿ ಎಂಬಲ್ಲಿ ಜನಿಸಿದರು. ಇವರು ಏಕಚಕ್ರಂ, ಬಾಹುಬಲಿವಿಜಯಂ, ಗುರುಪಾರಮಿತ್ರಚರಿತಂ, ಗೊಮ್ಮಟೇಶ ಪಂಚಕಂ ಮೊದಲಾದ ಕೃತಿಗಳನ್ನು ಸಂಸ್ಕೃತದಲ್ಲಿ ಬರೆದು ಪ್ರಕಟಿಸಿದ್ದಾರೆ. ಇವರು ಭಾಷಾಂತರಪಥ, ಲೌಕಿಕ ನ್ಯಾಯಗಳು, ಸೂಕ್ತಿವ್ಯಾಪ್ತಿ, ಉಪನಿಷತ್ ಕಥೆಗಳು, ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ ಎನ್ನುವ ಮೊದಲಾದ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರು ವಾಲ್ಮೀಕಿ ರಾಮಾಯಣ, ಅಮರಕೋಶ, ವಿದುರನೀತಿ, ಶ್ರೀಮದ್ಭಾಗವತದ ದಶಮಸ್ಕಂದ, ವಾಕ್ಯಪದೀಯದ ಬ್ರಹ್ಮಕಾಂಡ, ವಿದ್ಯಾರಣ್ಯರ ಪಂಚದಶಿ ಮೊದಲಾದ ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರಿಗೆ ರಾಷ್ಟ್ರಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ತಿರುಪತಿಯ ಸಂಸ್ಕೃತ ವಿಶ್ವವಿದ್ಯಾಲಯದ ಮಹಾಮಹೋಪಧ್ಯಾಯ ಗೌರವ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಆದಿಚುಂಚನಗಿರಿ ಮಹಾಸಂಸ್ಥಾನವು ಕೊಡಮಾಡುವ ಚುಂಚಶ್ರೀ ಪ್ರಶಸ್ತಿ, ರಾಷ್ಟ್ರಪತಿಗಳ ಗೌರವ ಪ್ರಶಸ್ತಿಪತ್ರ ಮೊದಲಾದ ಹಲವು ಪ್ರಶಸ್ತಿಗಳು ಸಂದಿವೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*2=2**

**10.** * **ದೇಶ ಸುತ್ತು ಕೋಶ ಓದು.**
* **ತುಂಬಿದ ಕೊಡ ತುಳುಕುವುದಿಲ್ಲ.**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಒಟ್ಟು** | **2 ಅಂಕಗಳು** |

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **1*2=2**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

**11. "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"**
**ಆಯ್ಕೆ :–** ಈ ವಾಕ್ಯವನ್ನು ಶ್ರೀ ಶಿವರಾಮ ಕಾರಂತ ಅವರು ಬರೆದಿರುವ **'ಅಬುವಿನಿಂದ ಬರಾಮಕ್ಕೆ' ಗ್ರಂಥದಿಂದ** ಆಯ್ದ **'ಬೆಡಗಿನ ತಾಣ ಜಯಪುರ'** ಎಂಬ ಪ್ರವಾಸ ಸಾಹಿತ್ಯದಿಂದ ಆರಿಸಲಾಗಿದೆ.
**ಸಂದರ್ಭ :–** 'ಜಯಪುರದ ಅಂಬೇರ ಬೆಟ್ಟದಲ್ಲಿ ಸಂಜೆ, ಮುಂಜಾನೆಗಳಲ್ಲಿ ಗುಡ್ಡ ಬೆಟ್ಟ ಹಾಗೂ ಕಣಿವೆಗಳ ಅಪೂರ್ವ ಮೋಹಕತೆಯನ್ನು ತಾಳುತ್ತವೆ. ಹಿಂದೆ ನಾನು ಅಲ್ಲಿಗೆ ಹೋದಾಗ ಜನವಸತಿ ಇದ್ದಿರಲಿಲ್ಲ' ಎಂದು

ಹಿಂದಿನ ಭೇಟಿಯಲ್ಲೂ, ಈಗಿನ ಭೇಟಿಯಲ್ಲೂ ಕಂಡ ಬದಲಾವಣೆಯನ್ನು ಗುರುತಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಜಯಪುರದ ಅಂಬೇರ ಬೆಟ್ಟ ಪ್ರದೇಶ ಈ ಹಿಂದೆ ಹೇಗಿತ್ತು ಎಂಬುದನ್ನು ಲೇಖಕರು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1/2 ಅಂಕ)**

**12.** **ದಟ್ಟ ಕಾಡಿನಲ್ಲೊಂದು ಹೆಮ್ಮರದ ಹೊದರಿನಲಿ**
**ಇರುತ್ತಿತ್ತು ಪುಟ್ಟ ಸಂಸಾರ ಹೂಡಿ**
**ಮುದ್ದು ಬಿಳಿ ಪಾರಿವಾಳಗಳ ಜೋಡಿ**

**ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ**
**ಎಂದಿಗೂ ಅಗಲಿರವು ಒಂದನೊಂದು**
**ಹಿಗ್ಗು ತುಂಬಿತು ಹೊದರಿನಲ್ಲಿ ಬಂದು**

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

| | |
|---:|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **1. ಅಂಕಗಳು** |
| **ಒಟ್ಟು** | **2. ಅಂಕಗಳು** |

**13.** ನವಭಾವ–ನವಜೀವ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;

ಈ ಪದ್ಯಭಾಗವನ್ನು ಶ್ರೀ **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕೃತಿಯಿಂದ ಆಯ್ದ **'ಹೊಸಹಾಡು'** ಎಂಬ ಕವನದಿಂದ ಆರಿಸಲಾಗಿದೆ.

ಹೊಸಭಾವನೆ, ಹೊಸಜೀವನ ಹೊಸ ಶಕ್ತಿಯನ್ನು ತುಂಬುವಂತಹ ಹಾಡನ್ನು ಹಾಡುವಾಗ ತೀವ್ರತರವಾದ ಗಂಭೀರ ಭಾವನೆಯ ತೆರೆಯು ಹರಡಿ ವೀರಧ್ವನಿ ಮೊಳಗಬೇಕು ಎಂದು ಕವಿ ಬಯಸುತ್ತಾರೆ. ಬದುಕಿಗೆ ಹೊಸ ತಿರುವನ್ನು ನೀಡಬಲ್ಲ ಭಾವತೀವ್ರತೆಯಿಂದ ಕೂಡಿದ ವೀರಧ್ವನಿಯ ಹಾಡನ್ನು ಹಾಡಬೇಕು ಎಂಬುದನ್ನು ಕವಿಗಳು ಈ ಮಾತಿನ ಮೂಲಕ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾರೆ.

## ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 1 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 2 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 3 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 4 | ರಾಮರಾಜ್ಯ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 5 | ಪಾರಿವಾಳ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 6 | ಗುಣಸಾಗರಿ ಪಂಡರೀಬಾಯಿ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 7 | ಬೆಡಗಿನ ತಾಣ ಜಯಪುರ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 8 | ಹೊಸಹಾಡು | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 9 | ರಾಮರಾಜ್ಯ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 10 | ವಾಕ್ಯ ರಚನೆ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| 11 | ಬೆಡಗಿನ ತಾಣ ಜಯಪುರ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 12 | ಪಾರಿವಾಳ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 13 | ಹೊಸಹಾಡು | ಪ್ರಶಂಸೆ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| | ಒಟ್ಟು | | | | 20 | | 50 + 10 ನಿಮಿಷಗಳು |